# ಸೃಷ್ಟಿಯಾಯಿತು ಥಳಥಳ

ಮೋಡ ಗುಡುಗಿತು ಗುಡುಗುಡು
ಮಿಂಚು ಹೊಳೆಯಿತು ಫಳಫಳ
ಗಾಳಿ ಬೀಸಿತು ಭರಭರ
ಮಳೆಯು ಸುರಿಯಿತು ರಪರಪ

ನೀರು ಹರಿಯಿತು ಜುಳುಜುಳು
ಹಕ್ಕಿ ಉಲಿದವು ಚಿಲಿಪಿಲಿ
ಕುಸುಮ ಬಿರಿದವು ಘಮಘಮ
ಸೃಷ್ಟಿಯಾಯಿತು ಥಳಥಳ

ಧರೆಯು ಆಯಿತು ಹಸಿಹಸಿ
ರೈತ ಹಿಗ್ಗುತ ಹಿರಿಹಿರಿ
ಬೀಜ ಬಿತ್ತಿದ ಸಾಲುಸಾಲು
ಕನಸು ಕಾಣುತ ಗರಿಗರಿ

ಬೆಳೆಯು ಬೆಳೆಯಿತು ಮಿರಿಮಿರಿ
ತೆನೆಯು ತೂಗಿತು ಬಾಗಿಬಾಗಿ
ಕಣಜ ತುಂಬಲು ರಾಶಿರಾಶಿ
ಅನ್ನದಾತನು ಖುಷಿಖುಷಿ

ಮಳೆಯು ಆದರೆ ವರುಷವರುಷ
ಎಲ್ಲರೆದೆಯಲಿ ಹರುಷಹರುಷ
ತುಂಬಿಕೊಳ್ಳುತ ದಿನದಿನವು
ಬದುಕು ಆಗದು ಭಾರಭಾರ.

**– ಸೋಮಲಿಂಗ ಬೇಡರ,**
**ಆಲೂರ**





# ರಾಜನ ದರ್ಬಾರ್

ಸೇರಿದರೆಲ್ಲರು ಮಕ್ಕಳು ಒಂದೆಡೆ
ತಂದರು ವಿಧವಿಧ ಗೊಂಬೆಗಳ

ರಾಜ ರಾಣಿ ಮಂತ್ರಿ ಗೊಂಬೆ
ರಾಜನ ಕಾಯುವ ಸೈನಿಕ ಗೊಂಬೆ

ಅರಸನ ಪ್ರೀತಿಯ ಪ್ರಜೆಗಳ ಗೊಂಬೆ
ಅಂತಃಪುರದ ಪರಿವಾರದ ಗೊಂಬೆ

ವಿಧ ವಿಧ ವಾದ್ಯವ ನುಡಿಸೋ ಗೊಂಬೆ
ರಂಭೆಯಂತೆ ಕುಣಿಯೋ ಗೊಂಬೆ

ಆನೆಯ ಮೇಲೆ ರಾಜನ ಕೂರಿಸಿ
ಸೇವಕ ಗೊಂಬೆಯ ಮುಂದೆ ನಿಲಿಸಿ

ಮಾವುತ ಗೊಂಬೆಗೆ ಅಂಕುಶವಿರಿಸಿ
ಸುತ್ತಲು ಒಮ್ಮೆ ಮೆರವಣಿಗೆ ನಡೆಸಿ

ಬೀದಿ ಬೀದಿಯಲಿ ಗೊಂಬೆಗಳ ಮೆರೆಸಿ
ಬಂದರು ಮತ್ತೆ ಅರಮನೆಯರಸಿ

ಪಟ್ಟದ ಮೇಲೆ ರಾಜನ ಗೊಂಬೆ
ರಾಜನ ಪಕ್ಕದಿ ರಾಣಿಯ ಗೊಂಬೆ

ಚಾಮರ ಬೀಸೋ ಸೇವಕಿ ಗೊಂಬೆ
ಕುಳಿತವು ಇಕ್ಕೆಡೆ ಮಂತ್ರಿಗಳ ಗೊಂಬೆ

ಶುಭವನು ಹರಸಿತು ರಾಜಗುರು ಗೊಂಬೆ
ಕವನವ ಓದಿದ ಕವಿ ಗೊಂಬೆ

ಹಾಸ್ಯದಿ ರಾಜನ ನಗಿಸಿತು ಗೊಂಬೆ
ಬಹುಪರಾಕ್ ನುಡಿದವು ಪ್ರಜೆಗಳ ಗೊಂಬೆ

ಗೊಂಬೆಯ ಕುಣಿಸಿ ದರ್ಬಾರ್ ನಡೆಸಿ
ಮಕ್ಕಳು ನಲಿದರು ಎಲ್ಲರ ನಗಿಸಿ

ರಾಜನ ದರ್ಬಾರ್ ಆಟವು ಮುಗಿದಿತ್ತು
ಮಕ್ಕಳ ಮನವನು ಮನೆಯು ಸೆಳೆದಿತ್ತು.

**–ಸುಶೀಲಾ ಸೋಮಶೇಖರ್,**
**ಹಾಸನ**

**ನಿಮಗೆಷ್ಟು ಗೊತ್ತು**

# ಗೂದೇ ಹಣ್ಣು



ಹಳ್ಳಿಗಳ ತಿಪ್ಪೆಯಲ್ಲಿ ಬೆಳೆಯುವ ಈ ಹಣ್ಣುಗಳನ್ನು ಗೂದೇಹಣ್ಣು ಎಂದು ಕರೆಯುತ್ತಿದ್ದರು. ತಿಪ್ಪೆಯಲ್ಲಿ ಬೆಳೆಯುತ್ತಿದ್ದರಿಂದ ಗೂದೇಹಣ್ಣುಗಳನ್ನು ತಿನ್ನಲು ಬಳಸುತ್ತಿರಲಿಲ್ಲ. ನಾಟಿ ವೈದ್ಯರು ಕಾಡಿನ ಸಸ್ಯ ಮತ್ತು ಹಣ್ಣುಗಳನ್ನು ಔಷಧಿಗಳ ತಯಾರಿಕೆಗಾಗಿ ಪರೀಕ್ಷಿಸುತ್ತಿದ್ದಾಗ ಈ ಹಣ್ಣು ತಿನ್ನಲು ಯೋಗ್ಯವೆಂದು ಖಚಿತಪಡಿಸಿದರು. ಇದಾದ ನಂತರ ಗೂದೇಹಣ್ಣಿನ ತಳಿ ಸಂಶೋಧಿಸಿ ರೈತರು ಪ್ರಮುಖ ವಾಣಿಜ್ಯ ಬೆಳೆಯಾಗಿ ಬೆಳೆಯುವಂತಾಯಿತು ಆಗ ಕನ್ನಡದ ಗೂದೇಹಣ್ಣು ಇಂಗ್ಲೀಷ್‌ನ ಟೊಮ್ಯಾಟೋ ಎಂದು ಪ್ರಚಲಿತಕ್ಕೆ ಬಂತು. ಇಂದಿನವರು ತಿಪ್ಪೆಗಳಲ್ಲಿ ಬೆಳೆಯುವ ಈ ಹಣ್ಣುಗಳನ್ನು ಮೂಲ ಹೆಸರಾದ ಗೂದೇಹಣ್ಣಿನಿಂದ ಗುರುತಿಸದೆ ಕಜ್ಜಿ ಟೊಮ್ಯಾಟೋ ಅಥವಾ ತಿಪ್ಪೆ ಟೊಮ್ಯಾಟೋ ಅಂತಾ ಕರೆಯುತ್ತಿದ್ದಾರೆ.

**–ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ.**